**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.790/2025**

| | | |
|---|---|---|
| ಸಾಕ್ಷಿದಾರರ ಹೆಸರು | : ವಾರಿಜ | ಪ್ರಾಸಾ-1 |
| ಗಂಡನ ಹೆಸರು | : ಸೋಮಪ್ಪ ಗೌಡ | ಚಾಸಾ-1 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 10.02.2026. |
| ವಾಸಸ್ಥಳ | : ಜಾರಗಲ್ಲು | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-2 ರಿಂದ 8 ರವರ ಪರಿಚಯ ನನಗಿದೆ.

ಸಾಕ್ಷಿಯು ದಿ.12.06.2024 ರಂದು ನೀಡಿದ ದೂರುವ ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.13.06.2024 ರಂದು ಬರೆದ ಮಹಜರ್ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಸಮಯದಲ್ಲಿ ತೆಗೆದ ನಾಲ್ಕು ಫೋಟೋಗಳನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಫೋಟೋಗಳನ್ನು ನಿಪಿ-3 ರಿಂದ 6 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.15.07.2024 ರಂದು ಸ್ವತ್ತನ್ನು ಸ್ವೀಕರಿಸಿಕೊಂಡ ಬಗ್ಗೆ ನೋಡಿ ಗುರುತಿಸಿದ್ದು, ಸದರಿ ಸಮಯದಲ್ಲಿ ಬರೆದ ಪಂಚನಾಮೆಯನ್ನು ನಿಪಿ-7 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಫೋಟೋಗಳನ್ನು ನಿಪಿ-8, ಸಿಡಿಯನ್ನು ನಿಪಿ-9 ಮತ್ತು ಕಲಂ 63(4)(ಸಿ) ರಡಿಯ ದೃಢೀಕೃತ ಪ್ರತಿಯನ್ನು ನಿಪಿ-10 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.16.06.2024 ರಂದು ನೀಡಿದ ಮರು ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು.

ನಿಪಿ-1 ಮತ್ತು 2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಿಪಿ-3 ರಿಂದ 6 ಮತ್ತು 8 ನ್ನು ಯಾವ ವಿಷಯದ ಕುರಿತು ತೆಗೆಯಲಾಗಿರುತ್ತದೆ ಎಂಬುದರ ಮಾಹಿತಿ ನನಗಿರುವುದಿಲ್ಲ. ನಿಪಿ-1 ಮತ್ತು 2 ಕ್ಕೆ ಯಾವಾಗ, ಎಲ್ಲಿ ಮತ್ತು ಯಾವ ವಿಷಯದ ಕುರಿತು ಸಹಿ ಮಾಡಿರುತ್ತೇನೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಇದನ್ನು ಹೊರತುಪಡಿಸಿ ನನಗೆ ಇನ್ನಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಾಣವ ಒಡವೆಗಳು ತನ್ನದು ಎಂದು ಗುರುತಿಸಿದ ಮೇರೆಗೆ, ಸದರಿ ಫೋಟೋಗಳನ್ನು ನಿಪಿ-11 ರಿಂದ 13 ಎಂದು ಗುರುತಿಸಲಾಯಿತು. ಸದರಿ ಒಡವೆಗಳು ನನ್ನ ವಶದಲ್ಲಿಯೇ ಇದ್ದು ಅವುಗಳನ್ನು ಬ್ಯಾಂಕ್

ನಲ್ಲಿ ಇಟ್ಟಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.12.06.2024 ರಂದು ನಾನು ಚಾಸಾ-2 ರವರ ಮನೆಗೆ ಕೂಲಿ ಕೆಲಸಕ್ಕೆ ಹೋಗಲು ಮನೆ ಬೀಗ ಹಾಕಿಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಮ.3.15 ರ ಸಮಯಕ್ಕೆ ಮನೆಗೆ ಹಿಂತಿರುಗಿದಾಗ ಮನೆಯ ಬಾಗಿಲಿಗೆ ಹಾಕಿದ್ದ ಬೀಗವು ಕಾಣೆಯಾಗಿದ್ದು, ಮನೆಯ ಬಾಗಿಲಿಗೆ ಬರೀ ಚಿಲಕ ಹಾಕಿದ್ದು ಅದನ್ನು ನಾನು ನೋಡಿ ಗಾಬರಿಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಒಳಗೆ ಹೋಗಿ ನೋಡಲಾಗಿ ಗಾಡ್ರೇಜ್ ಬೀರುವಿನಲ್ಲಿ ಇದ್ದ 22 ಗ್ರಾಂ ಬಂಗಾರದ ನೆಕ್ಲೆಸ್, 8 ಗ್ರಾಂ ಬಂಗಾರದ ಓಲೆ ಮತ್ತು ಲಾಕರ್ ನಲ್ಲಿ ಇಟ್ಟಿದ ರೂ.1,500/- ಹಣವು ಕಾಣೆಯಾಗಿತ್ತು ಎಂದರೆ ಸರಿಯಲ್ಲ. ನಂತರ ಮನೆಯನ್ನು ಹುಡುಕಿ ನೋಡಲಾಗಿ ಎಲ್ಲೂ ಸಿಗದೇ ಯಾರೋ ಕಳ್ಳತನ ಮಾಡಿರಬಹುದು ಎಂದು ತಿಳಿದು, ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಮ್ಮ ಮನೆಯಲ್ಲಿ ಕಳ್ಳತನವಾದ ಒಡವೆಗಳು 1,75,000/- ರೂಗಳು ಬೆಲೆ ಬಾಳುತ್ತವೆ ಎಂದು ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ನನ್ನ ದೂರಿನ ಮೇರೆಗೆ ದಿ.13.06.2024 ರಂದು ಪೋಲಿಸರು ನಮ್ಮ ಮನೆಗೆ ಬಂದು ನಾನು ತೋರಿಸಿದ ಮೇರೆಗೆ ಮಹಜರ್ ಕ್ರಮವನ್ನು ಜರುಗಿಸಿದ್ದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-3 ರಿಂದ 6 ನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ದಿ.16.06.2024 ರಂದು ಮ.3.30 ರ ಸಮಯಕ್ಕೆ ಪೋಲಿಸ್ ಠಾಣೆಗೆ ಹೋಗಿದ್ದು, ನ್ಯಾಯಲಾಯದ ಮುಂದಿರುವ ಆರೋಪಿಯು ನಮ್ಮ ಮನೆಯ ಕಳ್ಳತನ ಮಾಡಿರುತ್ತಾರೆ ಎಂದು ಪೋಲಿಸರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನ್ಯಾಯಲಯದ ಮುಂದಿರುವ ಆರೋಪಿಯನ್ನು ನಾನು ಠಾಣೆಯಲ್ಲಿ ನೋಡಿ, ಪೋಲಿಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿ.15.07.2024 ರಂದು ಮೂಡಿಗೆರೆಯ ವೃತ್ತ ಕಛೇರಿಯಲ್ಲಿ ಕಳುವಾದ ವಸ್ತುಗಳನ್ನು ನನ್ನ ವಶಕ್ಕೆ ಪಡೆದಿರುತ್ತೇನೆ ಮತ್ತು ಸದರಿ ಸಮಯದಲ್ಲಿ 6.10 ರಿಂದ 7.00 ರವರೆಗೂ ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ ಮತ್ತು ನಿಪಿ-8 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-11 ರಿಂದ 13 ರಲ್ಲಿ ಕಾಣುತ್ತಿರುವ ಒಡವೆಗಳು ಕಳ್ಳತನವಾಗಿರುತ್ತವೆ ಎಂದು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.